Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 25-12-2022

**ಪತ್ರಿಕಾ ಪ್ರಕಟಣೆ:**

# ವಿ. ಡಿ. ಐ. ಟಿ. ಮುಡಿಗೆ ರಾಷ್ಟ್ರೀಯ ಪ್ರಶಸ್ತಿಗಳ ಗರಿ

ಹಳಿಯಾಳದ ವಿ ಡಿ ಐ ಟಿ ಇಂಜಿನಿಯರಿಂಗ್ ಮಹಾವಿದ್ಯಾಲಯವು 2004 ರಿಂದ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುತ್ತಾ ಮುಂಚೂಣಿಯಲ್ಲಿದೆ. ತಾಂತ್ರಿಕ, ಸಾಮಾಜಿಕ ಬದ್ಧತೆ, ಸಂಶೋಧನೆ, ಮುಂತಾದ ಕ್ಷೇತ್ರಗಳಲ್ಲಿ ವಿನೂತನ ಕಾರ್ಯಕ್ರಮ ಗಳ ಮೂಲಕ ವಿದ್ಯಾರ್ಥಿ ಗಳ ಸರ್ವ ತೋಮುಖ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದೆ. ವಿ ಡಿ ಐ ಟಿ ಯ ಎಲ್ಲ ಆಯಾಮ ಗಳಲ್ಲಿನ ಚಟುವಟಿಕೆ ಗಮನಿಸಿ, ಇತ್ತೀಚಿಗೆ ನವದೆಹಲಿ ಯಲ್ಲಿ ಮಹಾವಿದ್ಯಾಲಯವನ್ನು ಸನ್ಮಾನಿಸಲಾಯಿತು. ದಕ್ಷಿಣ ಭಾರತ ವಲಯದ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಮಹಾವಿದ್ಯಾಲಯವೆಂದು ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳವನ್ನು ಎಜು ಸ್ಕಿಲ್ ಕನೆಕ್ಟ್ ಸಂಸ್ಥೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ನವದೆಹಲಿ ಸಹಯೋಗದಲ್ಲಿ 2022ರ ವಾರ್ಷಿಕ ಸಮಾವೇಶದಲ್ಲಿ ಪುರಸ್ಕರಿಸಿತು. ಡಿಸೆಂಬರ್ 23ರಂದು ನವದೆಹಲಿಯಲ್ಲಿ ನಡೆದ ಈ ವಾರ್ಷಿಕ ಸಮಾವೇಶದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರಿಗೆ ಶ್ರೇಷ್ಠ ಪ್ರಾಚಾರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ವಿಭಾಗದ ಸಂಚಾಲಕರಾದ ಪ್ರೊ. ರಜತ್ ಆಚಾರ್ಯ ಅವರಿಗೆ ಶ್ರೇಷ್ಠ ಸಂಚಾಲಕ ಪ್ರಶಸ್ತಿ ನೀಡಲಾಯಿತು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಪೂರ್ಣಿಮಾ ರಾಯ್ಕರ್ ಅವರನ್ನು ಉತ್ತಮ ಶಿಕ್ಷಕ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಲಾಯಿತು. ಈ ಸಮಾರಂಭ ದಲ್ಲಿ ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ಮಂಡಳಿ ಯ ಅಧ್ಯಕ್ಷ ರಾದ ಪ್ರೊ. ಅನಿಲ್ ಸಹಸ್ರಬುದ್ದೆ, ಎನ್. ಬಿ. ಎ. ದ ಮಾಜಿ ಅಧ್ಯಕ್ಷರಾದ ಪ್ರೊ. ಕೆ. ಕೆ. ಅಗರ್ವಾಲ್, ಆಂಧ್ರ ಪ್ರದೇಶ ಸರ್ಕಾರದ ಶೈಕ್ಷಣಿಕ ಸಲಹೆಗಾ ರರಾದ ಆಲೂರ ಸಾಂಬಾಶಿವ ರೆಡ್ಡಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಮಹಾವಿದ್ಯಾಲಯದ ಸಾಧನೆಯನ್ನು ಗುರುತಿಸಿ ರಾಷ್ಟ್ರಮಟ್ಟದ ಸಮಾವೇಶದಲ್ಲಿ ಪುರಸ್ಕರಿಸಿರುವುದು ಅತೀವ ಹೆಮ್ಮೆಯ ವಿಷಯ ಎಂದು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕೂರ್ ತಿಳಿಸಿದ್ದಾರೆ. ಎಲ್ಲ ಸಿಬ್ಬಂದಿಗಳ, ವಿದ್ಯಾರ್ಥಿ ಮತ್ತು ಪಾಲಕರ ಸಹಕಾರ ದಿಂದ ಮಹಾವಿದ್ಯಾಲಯಕ್ಕೆ ಈ ಪುರಸ್ಕಾರ ದೊರಕಿದೆ ಎಂದು ಪ್ರಾಚಾರ್ಯರು ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯಕ್ಕೆ, ಪ್ರಾಚಾರ್ಯರಿಗೆ, ಪ್ರೊ ರಜತ್ ಆಚಾರ್ಯ ಮತ್ತು ಪ್ರೊ. ಪೂರ್ಣಿಮಾ ರಾಯ್ಕರ್ ಅವರಿಗೆ ದೊರೆತ ಸನ್ಮಾನದ ಕುರಿತು ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರಾಂಶುಪಾಲರು

**Principal**
**KLS Vishwanathrao Deshpande**
**Institute of Technology, Haliyal**

